# ಸ್ಮಾರ್ಟ್‌ಗ್ಲಾಸ್

## ಸ್ಮಾರ್ಟ್‌ಫೋನ್ ಉತ್ತರಾಧಿಕಾರಿ?




**ಕೀಪ್ಯಾಡ್ ಮೊಬೈಲನ್ನು ಸ್ಮಾರ್ಟ್‌ಫೋನ್ ಮೂಲೆಗೆ ಸರಿಸಿದಂತೆ, ಸ್ಮಾರ್ಟ್‌ಫೋನನ್ನು ಸ್ಮಾರ್ಟ್‌ಗ್ಲಾಸ್ ಮೂಲೆಗುಂಪಾಗಿಸುವ ಕಾಲ ಸನ್ನಿಹಿತವಾಗಲಿದೆ!**

**■ ಶಶಿಕುಮಾರ್ ಸಿ.**

**ಮುಂದಿನ** ದಶಕದೊಳಗೆ ಸ್ಮಾರ್ಟ್‌ಫೋನ್‌ಗಳಿಗೆ ಪರ್ಯಾಯವಾಗಿ ಸ್ಮಾರ್ಟ್‌ಗ್ಲಾಸ್‌ಗಳು ಗಟ್ಟಿಯಾಗಿ ಬೇರೂರಲಿವೆ...

ಹೀಗೆಂದು ಭವಿಷ್ಯ ನುಡಿದವರು ಬೇರಾರೂ ಅಲ್ಲ, ಸಾಮಾಜಿಕ ಜಾಲತಾಣಗಳ ಕ್ಷೇತ್ರದಲ್ಲಿ ಪಾರುಪತ್ಯ ಮೆರೆಯುತ್ತಿರುವ ‘ಮೆಟಾ’ ಮಾಲೀಕ ಮಾರ್ಕ್ ಜುಕರ್‌ಬರ್ಗ್. ಇದಕ್ಕೆ ಕಾರಣ, ಸ್ವತಃ ಮೆಟಾ ಅಭಿವೃದ್ಧಿ ಮಾಡುತ್ತಿರುವ ಸ್ಮಾರ್ಟ್‌ಗ್ಲಾಸ್‌ಗಳ ವ್ಯಾಪ್ತಿಯ ಮೇಲಿನ ವಿಶ್ವಾಸವೂ ಇರಬಹುದು. ಈ ಎಲ್ಲದರ ಹಿನ್ನೆಲೆಯಲ್ಲಿ ಮಾರ್ಕ್ ನೀಡಿದ ಈ ಹೇಳಿಕೆ, ಟೆಕ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಸ್ಮಾರ್ಟ್‌ಗ್ಲಾಸ್‌ಗಳು ಮುಂದಿನ ದಶಕದಲ್ಲಿ ಸ್ಮಾರ್ಟ್‌ಫೋನ್‌ಗಳಿಗಿಂತಲೂ ಹೆಚ್ಚು ಜನಪ್ರಿಯಗೊಳ್ಳಲಿವೆ. ಪ್ರಾಯೋಗಿಕವಾಗಿಯೂ ಅವು ಹೆಚ್ಚು ಬಳಕೆಸ್ನೇಹಿಯಾಗಿ ಇರಲಿವೆ. ಈ ಕಾರಣದಿಂದಲೇ ಭವಿಷ್ಯದ ಬದಲಾವಣೆ ಬಗ್ಗೆ ಜುಕರ್‌ಬರ್ಗ್ ಈ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿರುವುದು.

ಒಂದು ಕಾಲದಲ್ಲಿ ಕೀಪ್ಯಾಡ್ ಫೋನ್‌ಗಳು ಜಗತ್ತಿನಲ್ಲಿ ಅಗ್ರಸ್ಥಾನ ಪಡೆದಿದ್ದವು. ಸ್ಮಾರ್ಟ್‌ಫೋನ್‌ಗಳು ಮುನ್ನೆಲೆಗೆ ಬಂದ ಬಳಿಕ ಕೀಪ್ಯಾಡ್ ಫೋನ್‌ಗಳು ಗಣನೀಯವಾಗಿ ಮರೆಗೆ ಸರಿದವು. ಇದೇ ರೀತಿ, ಸ್ಮಾರ್ಟ್‌ಗ್ಲಾಸ್‌ಗಳು ಹೆಚ್ಚು ಬಳಕೆಗೆ ಬರಲಿದ್ದು, ಇದರ ನೇರ ಪರಿಣಾಮ ಸ್ಮಾರ್ಟ್‌ಫೋನ್‌ಗಳ ಮೇಲೆ ಬೀರಲಿದೆ. ಸ್ಮಾರ್ಟ್‌ಫೋನ್‌ಗಳ ಜಾಗವನ್ನು ಸ್ಮಾರ್ಟ್‌ಗ್ಲಾಸ್‌ಗಳು ಆವರಿಸಿಕೊಳ್ಳಲಿವೆ ಎನ್ನುವುದು ಮೆಟಾ ಒಡೆಯನ ಮಾತಿನ ಅರ್ಥ.

ಈ ಮಾತು ಟೆಕ್ ವಲಯದಲ್ಲಿ ಸದ್ದು ಮಾಡಲು ಬಹುಮುಖ್ಯ ಕಾರಣ, ಮೆಟಾ, ಗೂಗಲ್ ಸೇರಿದಂತೆ ಆ್ಯಪಲ್‌ನಂತಹ ಟೆಕ್ ದೈತ್ಯ ಕಂಪನಿಗಳು ಸ್ಮಾರ್ಟ್‌ಗ್ಲಾಸ್‌ಗಳ ಅಭಿವೃದ್ಧಿಗೆ ತಮ್ಮ ಸಂಪೂರ್ಣ ಶಕ್ತಿ ಧಾರೆಯೆರೆಯುತ್ತಿರುವುದು.

ಸುಮಾರು ಮೂರು ದಶಕಗಳಿಂದ ಕೀಪ್ಯಾಡ್ ಫೋನ್ ಸೇರಿದಂತೆ ಸ್ಮಾರ್ಟ್‌ಫೋನ್‌ಗಳು ನಮ್ಮ ದೈನಂದಿನ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿವೆ. ಮಾತುಕತೆಗಷ್ಟೇ ಸೀಮಿತವಾಗಿದ್ದ ಜಮಾನದಿಂದ ಮೊಬೈಲ್‌ಗಳು ಮಿನಿ ಕಂಪ್ಯೂಟರ್‌ಗಳಾಗಿ ಬದಲಾವಣೆಯಾಗುವವರೆಗೆ ಬೆಳೆದುನಿಂತಿವೆ. ಅವುಗಳ ಹೊರತಾದ ಬದುಕು ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಸ್ಮಾರ್ಟ್‌ಫೋನ್‌ಗಳು ನಮ್ಮನ್ನು ವ್ಯಾಪಿಸಿವೆ. ಈ ಅಸಾಧ್ಯತೆಯನ್ನು ಸ್ಮಾರ್ಟ್‌ಗ್ಲಾಸ್‌ಗಳು ಸಾಧ್ಯವಾಗಿಸಲಿವೆ ಎನ್ನುವುದು ಈಗಿನ ನಿರೀಕ್ಷೆ.

### ಸವಾಲಿನ ಹಾದಿ

ಸ್ಮಾರ್ಟ್‌ಗ್ಲಾಸ್ ನಿಜಕ್ಕೂ ಸ್ಮಾರ್ಟ್‌ಫೋನ್‌ನಂತೆ ಕಾರ್ಯನಿರ್ವಹಿಸಬಹುದೇ? ಈ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡುವ ನೈಜ ನಿದರ್ಶನಗಳಿಲ್ಲ. ಸ್ಮಾರ್ಟ್‌ಫೋನ್‌ಗಳಂತೆ ಸ್ಮಾರ್ಟ್‌ಗ್ಲಾಸ್‌ಗಳನ್ನು ರೂಪಿಸುವುದು ನಿಜಕ್ಕೂ ಸಾಹಸದ ಕೆಲಸವೇ ಸರಿ. ಹೀಗಿದ್ದರೂ ಇಂಥದ್ದೊಂದು ಸಾಧ್ಯತೆಗೆ ಕೈಹಾಕಿರುವ ಟೆಕ್ ಕಂಪನಿಗಳ ಪಟ್ಟಿಯಲ್ಲಿ ಮೊದಲಿಗೆ ಕಾಣುವುದು ಮೆಟಾ, ಗೂಗಲ್ ಹಾಗೂ ಆ್ಯಪಲ್. ಈ ಕನಸಿಗೆ ದೊಡ್ಡ ಮಟ್ಟದಲ್ಲಿ ಹಣ ಹೂಡಿಕೆ ಮಾಡುತ್ತಿರುವುದೂ ಈ ಕಂಪನಿಗಳೇ.

ಮೆಟಾ ‘ರೇಬಾನ್ ಮೆಟಾ’, ಗೂಗಲ್ ‘ಗೂಗಲ್ ಗ್ಲಾಸ್’ ಹಾಗೂ ಆ್ಯಪಲ್ ‘ವಿಷನ್ ಪ್ರೊ’ ಹೆಸರಿನ ಸ್ಮಾರ್ಟ್‌ಗ್ಲಾಸ್‌ಗಳನ್ನು ಈಗಾಗಲೇ ಹೊರತಂದಿದ್ದು, ಇವುಗಳ ಮುಂದುವರೆದ ಭಾಗವಾಗಿ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ಸ್ಮಾರ್ಟ್‌ಗ್ಲಾಸ್‌ಗಳನ್ನು ಜಗತ್ತಿನೆದುರು ತೆರೆದಿಡುವಲ್ಲಿ ತೊಡಗಿಕೊಂಡಿವೆ. ಅಂದರೆ ಸ್ಮಾರ್ಟ್‌ಫೋನ್‌ಗಳ ರೀತಿ ಸ್ಮಾರ್ಟ್‌ಗ್ಲಾಸ್‌ಗಳು ಕಾರ್ಯನಿರ್ವಹಿಸುವಂತೆ ವೇದಿಕೆ ಸಿದ್ಧಪಡಿಸುತ್ತಿವೆ.

### ಜುಕರ್ ಹೇಳುವುದೇನು?

- ದೈನಂದಿನ ಕೆಲಸ ಕಾರ್ಯಗಳಿಗೆ ಸ್ಮಾರ್ಟ್‌ಗ್ಲಾಸ್‌ಗಳು ಹೆಚ್ಚು ಸಹಕಾರಿಯಾಗಲಿವೆ. ಅನುಕೂಲಕಾರಿ ಮತ್ತು ಹ್ಯಾಂಡ್ಸ್ ಫ್ರೀ ಬಳಕೆಯಿಂದಾಗಿ ಇವು ಜನರ ಆದ್ಯತೆಯಾಗಲಿವೆ.
- ಜೇಬಿನಲ್ಲಿ ಸ್ಮಾರ್ಟ್‌ಫೋನ್ ಇಟ್ಟುಕೊಂಡು ಅಥವಾ ಇನ್ನೆಲ್ಲೋ ದೂರದಲ್ಲಿಟ್ಟು ಅದನ್ನು ನೇರವಾಗಿ ಬಳಸದೆಯೇ ಅದರಂತೆಯೇ ಮಾಹಿತಿ ಪಡೆಯಲು, ಸಂವಹನ ಸಾಧಿಸಲು ಮತ್ತು ನ್ಯಾವಿಗೇಟ್ ಮಾಡಲು ಭವಿಷ್ಯದಲ್ಲಿ ಜನರು ಸ್ಮಾರ್ಟ್‌ಗ್ಲಾಸ್‌ಗಳ ಮೇಲೆಯೇ ಹೆಚ್ಚೆಚ್ಚು ಅವಲಂಬಿತರಾಗಲಿದ್ದಾರೆ.
- ಡಿಜಿಟಲ್ ವಿಷಯಗಳೊಂದಿಗೆ ಸಂವಹನ ನಡೆಸಲು ಸ್ಮಾರ್ಟ್‌ಗ್ಲಾಸ್‌ಗಳು ನೆರವಿಗೆ ಬರಲಿವೆ. ಅತ್ಯಾಧುನಿಕ ತಂತ್ರಜ್ಞಾನದ ಬಳಕೆಗೂ ಪೂರಕವಾಗಲಿವೆ.
- ಬಳಕೆಸ್ನೇಹಿ ಕಾರಣಕ್ಕಾಗಿ ಸ್ಮಾರ್ಟ್‌ಗ್ಲಾಸ್‌ಗಳತ್ತ ಜನರು ಒಲವು ಹೆಚ್ಚಾಗಲಿದೆ.
- ನೈಜ ಸಮಯದ ಮಾಹಿತಿಯನ್ನು ಅಪ್‌ಡೇಟ್ ಮಾಡುತ್ತವೆ. ನಿಮ್ಮ ಪ್ರಶ್ನೆಗಳಿಗೆ, ನಿಮ್ಮ ಅಗತ್ಯಕ್ಕೆ ತಕ್ಕಂತೆ ವೈಯಕ್ತಿಕ ಸಹಾಯಕರಾಗಿ ಕಾರ್ಯನಿರ್ವಹಿಸುತ್ತವೆ.

■